Mr. SPEAKER.—I have no option left except to put it to the vote of the House. The question is :

"That this Assembly is of the opinion that the Government of India may be requested to take immediate steps to divide the present State of Mysore into two States for reasons of administrative viability."

The motion was negatived.

NON-OFFICIAL RESOLUTION

re : Changing the present name of Mysore State to Karnataka State.

† ಶ್ರೀ ಎ. ಜೆ. ದೊಡ್ಡಮೇಟಿ.—ಅಧ್ಯಕ್ಷ ಮಹಾಶಯರೇ 'ಮೈಸೂರು ರಾಜ್ಯ ಎಂಬ ಈಗಿರುವ ಹೆಸರನ್ನು ಕರ್ನಾಟಕ ರಾಜ್ಯ ಎಂದು ಬದಲಾಯಿಸಲು ಅವಶ್ಯಕವಾದ ಕ್ರಮಗಳನ್ನು ಕೂಡಲೇ ಕೈಕೊಳ್ಳಬೇಕೆಂದು ಭಾರತ ಸರ್ಕಾರಕ್ಕೆ ಶಿಫಾರಸು ಮಾಡಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ.

ಅಧ್ಯಕ್ಷರು.—ಮೈಸೂರು ರಾಜ್ಯ ಎಂಬ ಈಗಿರುವ ಹೆಸರನ್ನು ಕರ್ನಾಟಕ ರಾಜ್ಯ ಎಂದು ಬದಲಾಯಿಸಲು ಅವಶ್ಯಕವಾದ ಕ್ರಮಗಳನ್ನು ಕೂಡಲೇ ಕೈಕೊಳ್ಳಬೇಕೆಂದು ಭಾರತ ಸರ್ಕಾರಕ್ಕೆ ಶಿಫಾರಸು ಮಾಡಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ. ಈ ನಿರ್ಣಯ ಮಂಡಿಸಲಾಗಿದೆ. ಸಭೆಯಲ್ಲಿ ಇದು ಚರ್ಚೆಯಾಗಬಹುದು.

† ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಈ ನಿರ್ಣಯ ಸುಮಾರು ಎರಡೂವರೆ ವರ್ಷಗಳ ಕೆಳಗೆ ಈ ಮಾನ್ಯ ಸಭೆಯ ಮುಂದೆ ಬಂದಿತ್ತು. ವಿಪುಲವಾದಂತಹ—ಕೆಲವು ಸಾರಿ ಭಾವೋದ್ರೇಕದಿಂದ ಕೂಡಿದಂತಹ ಚರ್ಚೆ ನಡೆದ ಮೇಲೆ ಈ ಸಭೆಯ ನಾಯಕರು ಒಂದು ನಿರ್ಣಯವನ್ನು ಮಂಡಿಸಿ ಈ ದೇಶದಲ್ಲಿ ತುರ್ತು ಪರಿಸ್ಥಿತಿ ಇರತಕ್ಕ ಈ ಸಂದರ್ಭದಲ್ಲಿ ಭಾವೋದ್ರೇಕವನ್ನುಂಟುಮಾಡತಕ್ಕ ಇಂತಹ ಸಮಸ್ಯೆಗಳ ಬಗ್ಗೆ ಈ ರಾಜ್ಯದ ಗಮನವನ್ನು ಹರಿಸಬಾರದು ಎಂಬ ದೃಷ್ಟಿಯಿಂದ ಈ ಚರ್ಚೆಯನ್ನು ಇನ್ನಷ್ಟು ಕಾಲದವರೆಗೆ ಮುಂದೆ ಹಾಕಬೇಕೆಂಬ ಸೂಚನೆಯನ್ನು ಆಗ ವಿನಂತಿ ಮಾಡಿಕೊಂಡರು, ಅದನ್ನು ಈ ಸಭೆ ಒಮ್ಮತದಿಂದ ಒಪ್ಪಿ ಈ ಚರ್ಚೆಯನ್ನು ಮುಂದಕ್ಕೆ ಹಾಕಿದ್ದು ಆಯಿತು. ಈಗ ಶ್ರೀಮಾನ್ ದೊಡ್ಡಮೇಟಿಯವರು ಈ ನಿರ್ಣಯವನ್ನು ಮತ್ತೆ ಈ ಸಭೆಯ ಮುಂದೆ ಮಂಡಿಸುವುದಕ್ಕೆ ಉಪಕ್ರಮಿಸಿದ್ದಾರೆ. ನಾನು ಬಹಳ ಗಂಭೀರವಾಗಿ, ಬಹಳ ಜವಾಬ್ದಾರಿಯುತವಾಗಿ ಮತ್ತು ಬಹಳ ಕಳಕಳಿಯಿಂದ ಶ್ರೀಮಾನ್ ದೊಡ್ಡಮೇಟಿಯವರಿಗೆ ಪ್ರಾರ್ಥನೆ ಮಾಡುತ್ತೇನೆ. ಅಂದು ಮುಖ್ಯಮಂತ್ರಿಯವರು ಮಂಡಿಸಿದ ಸೂಚನೆಗೆ ಅಂದು ಏನು ಸಂದರ್ಭ, ಅಂದಿನ ಸನ್ನಿವೇಶ ಏನಿತ್ತೋ ಆ ಸನ್ನಿವೇಶ ಇಂದೂ ಬದಲಾವಣೆಯಾಗಿಲ್ಲ. ಆ ಸನ್ನಿವೇಶಗಳೆಲ್ಲವೂ ಕೂಡ ಮುಂದುವರಿಯುತ್ತಲೇ ಇವೆ. ಆದ್ದರಿಂದ ಇಂದು ಮತ್ತೆ ಮೇಲೆಂದ ಮೇಲೆ, ಸಂಪೂರ್ಣ ಕರ್ನಾಟಕವನ್ನು ಮಾಡಬೇಕೆಂದು ಕೆಲವರು ಯಾರು ಹೊರಟಿದ್ದಾರೆ ಅವರಿಗೆ ನಮ್ಮ ಸಹಾಯ ಬೇಕೆಂದು ಅಪೇಕ್ಷೆಪಡುವುದಾದರೆ ಇಂತಹ ನಿರ್ಣಯವನ್ನು ಮತ್ತೆ ಮತ್ತೆ ಈ ಸಭೆಯಲ್ಲಿ ತರತಕ್ಕ ಹವ್ಯಾನವನ್ನು ಬಿಡಬೇಕೆಂದು ಶ್ರೀಮಾನ್ ದೊಡ್ಡಮೇಟಿಯವರಲ್ಲಿ ಪ್ರಾರ್ಥನೆ ಮಾಡಿ, ಈ ಸಭೆಯೂ ಕೂಡ ಇದನ್ನು ಬಹಳ ಕಳಕಳಿಯಿಂದ ಆಲೋಚನೆ ಮಾಡಬೇಕೆಂದು ಇಲ್ಲಿ ನೆರೆದಿರತಕ್ಕ ಎಲ್ಲರನ್ನೂ ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—How is it a point of order ? The only thing that I was trying to understand was that the matter has been discussed threadbare with emotion and upserge of feelings two and a half years ago and that an appeal was made by the Hon'ble the Chief Minister that it should not be pressed at that time. It was decided that it should be put off and there the matter ended. Is it a point of order and is any rule violated ? If I were to uphold the point of order, I would be finding

(MR. SPEAKER)

fault with myself in having admitted the resolution. If it is not discussable for any reason whatsoever, I should not have admitted it but I do not think I can prevent the House from discussing it. Whether it is to be voted or not, will depend upon how matters develop. Therefore I am unable to uphold the point of order.

ಶ್ರೀ ಎ. ಜೆ. ದೊಡ್ಡಮೇಟಿ.—ನ್ಯಾಯ, 1957ನೇ ಇಸವಿ ಸೆಪ್ಟೆಂಬರ್ 29ನೇ ತಾರೀಖಿನಿಂದ ಈ ಸುಮಾರು ಹತ್ತು ವರ್ಷದೊಳಗೆ ನನ್ನ ಸ್ನೇಹಿತರಾದಂತಹ ಶ್ರೀಮಾನ್ ಕೃಷ್ಣರವರ ಬಗ್ಗೆ ನನಗೆ ಬಹಳ ಗೌರವವಿದೆ.

ಶ್ರೀ ಕೆ. ಲಕ್ಕಪ್ಪ.—ಅವರೊಬ್ಬರೇ ಏಕೆ ?

ಶ್ರೀ ಎ. ಜೆ. ದೊಡ್ಡಮೇಟಿ.—ಉಳಿದವರ ಬಗ್ಗೆಯೂ ಕೂಡ ಅಷ್ಟೇ ಮಟ್ಟಿಗೆ ಗೌರವ, ಅಭಿಮಾನ ಇದೆ. ಅವರು ಪ್ರಗತಿ ಪರರು. ವಿಚಾರ ಶೀಲರು ಎಂದು ಹೇಳಿ ಅನೇಕಬೇಳೆ ಮನವರಿಕೆ ಮಾಡಿಕೊಂಡಿದ್ದೇನೆ. ಮುಖ್ಯ ಮಂತ್ರಿಗಳು ಹಿಂದೆ ಮನವಿ ಮಾಡಿಕೊಂಡ ಸಮಯದಲ್ಲಿ ಚೈನಾ ಆಕ್ರಮಣವಾಗಿತ್ತು, ಅದು ಆಗಿ ಒಂದು ತಿಂಗಳು ಆಗಿತ್ತು, ತುರ್ತು ಪರಿಸ್ಥಿತಿ ಇತ್ತು. ಈಗ ಪರಿಸ್ಥಿತಿ ಬದಲಾವಣೆಯಾಗಿಹೋಗಿದೆ, ಇವತ್ತು ಆ ಪರಿಸ್ಥಿತಿ ಇಲ್ಲ. ನಾವು ಇನ್ನು ಸ್ವಲ್ಪ ದಿವಸ ದಲ್ಲೇ ಬಹಳ ಮಹತ್ವರವಾದ ಮತ್ತೊಂದು ಪ್ರಶ್ನೆ ವಿಚಾರ ಮಾಡುವುದು ಇದೆ, ಅದನ್ನು ಅವರು ಏಕೆ ಹೇಳಲಿಲ್ಲವೋ ಏನೋ ಗೊತ್ತಿಲ್ಲ. ಅದು ಏನಾದರೂ ಆಗಲಿ, ಎರಡು ರಾಜ್ಯ ಆಗಬೇಕೆಂಬ ಮಾತು ಆಗುವ ಮಾತಲ್ಲ, ಹೋಗುವ ಮಾತಲ್ಲ ಎಂಬುದನ್ನು ಅವರು ತಿಳಿದಿರಬೇಕು. ಇವತ್ತು ಆ ದೃಷ್ಟಿಯಿಂದ ನಾನು ಪಿ. ಎಸ್. ಪಿ. ನಾಯಕರಿಗೆ, ವಿರೋಧ ಪಕ್ಷದಲ್ಲರತಕ್ಕ ಅನೇಕ ಪ್ರಗತಿಶೀಲ ನಾಯಕರಿಗೆ ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ. ಈ ರಾಜ್ಯದ ಪ್ರಗತಿ, ಈ ರಾಜ್ಯಕ್ಕೆ ಭದ್ರ ಬುನಾದಿ ಇರಬೇಕಾದರೆ....

Sri K. LAKKAPPA.—I rise on a point of order, Sir. The Hon'ble Member Sri Doddametti has just now referred to the P.S.P. Party. The P.S.P. Party stands for Karnataka and we are the first persons to have the name board as the Karnataka Praja Socialist Party. What Sri S. M. Krishana said was that this is not the proper time to discuss this matter when we are faced with external therat from China and Pakistan. He appealed to us not to fight for these smaller things and in the interest of promoting better understanding and better feelings of affection he wanted us to drop this matter now.

12-00 NOON.

Mr. SPEAKER.—Because, I allowed some indulgence, it does not mean that the Hon'ble member can convert it into a debate. A point of order has got a peculiar significance. It is a serious thing to raise a point of order. It is not lightly done. If it is lightly done, then all the sanctity behind it is lost. I have always said that a member who wants to raise a point of order must have in his mind the rule which is violated. Instead of that the member said that there was a reference to the Praja Socialist Party. Our rules are not concerned with party affilations. If a reference is made in good or bad terms, it is not a subject for a point of order. It may be unparliamentary and may be asked to be expunged if the circumstances so warrant it. Instead of that, the Hon'ble member Sri Lakkappa who has had so much experience is raising it as a point of order and is developing it. I am surprised at it. There is no point of order.

ಶ್ರೀ ಗಂಗಾಧರ ನಾಪೋಷಿ (ಗುಲ್ಬರ್ಗ).—ಇವರ ಪಾರ್ಟಿಗೆ ಕರ್ನಾಟಕ ಎನ್ನುವಂಥ ಒಂದು ಹೆಸರುಳ್ಳ ಬೋರ್ಡ್ ಇರಬೇಕಾಗಿದ್ದರೆ ಅಂಥ ಒಂದು ಹೆಸರನ್ನಾ ಇಡೀ ದೇಶಕ್ಕೇಕೆ ಇಡ ಬಾರದು ?

ಶ್ರೀ ಎ. ಜೆ. ದೊಡ್ಡಮೇಟಿ.—ಸ್ವಾಮಿ, ಅವರು ತತ್ವವನ್ನು ಒಪ್ಪಿಕೊಂಡಿದ್ದಾರೆ. ದೇಶದಲ್ಲಿ ಬೇರೆ ಬೇರೆ ರಾಜಕೀಯ ಪಕ್ಷಗಳೂ ಕೂಡ ಈ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರಿರಬೇಕು ಎಂಬುದನ್ನು ಒಪ್ಪಿಕೊಂಡಿವೆ ಎಂಬ ಅಂಶವನ್ನು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೆನು. ಕಳೆದ 10 ವರ್ಷಗಳಿಂದಲೂ ನಾವು ಇದಕ್ಕೆ ಶ್ರಮಿಸುತ್ತಿದ್ದೇವೆ. ನಮ್ಮ ಕಾಂಗ್ರೆಸ್ಸಿನವರೇ ಇದಕ್ಕೆ ಕಲ್ಲು ಹಾಕುತ್ತಿದ್ದಾರೆಂಬುದಾಗಿ ಕೆಲವರು ಟೀಕೆ ಮಾಡುತ್ತಿದ್ದಾರೆ. ಅಂಥಾ ಸಂದರ್ಭ ಬಂದಾಗ ಅದನ್ನು ಆಲೋಚನೆ ಮಾಡೋಣ.

ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು). —ಇಲ್ಲಿ ಅವರು ವಿರೋಧ ಮಾಡುತ್ತಿಲ್ಲ, ರಾಂಜಿನಲ್ಲಿ ಹಾಗೆ ಮಾಡುತ್ತಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ಕಳೆದ ಸುಮಾರು 10 ವರ್ಷಗಳಲ್ಲಿ ನಾನು ಈ ಪ್ರಶ್ನೆಯನ್ನು ಎಷ್ಟೇ ಕಡಮೆ ಎಂದರೂ 8—10 ಸಲವಾದರೂ ಇಲ್ಲಿ ತಂದು ಇದನ್ನು ಚರ್ಚೆ ಮಾಡಿದ್ದೇವೆ. ಆದರೆ ಏನೇನೋ ಕಾರಣಾಂತರಗಳಿಂದ ಇದನ್ನು ಹೀಗೆ ಮುಂದಕ್ಕೆ ಹಾಕಿಕೊಳ್ಳುತ್ತಾ ಬಂದಿದ್ದೇವೆ. ಈ ಹಿಂದೆ ಒಂದಾವರ್ತಿ ಈ ಪ್ರಶ್ನೆ ಇನ್ನೇನು ಐದು ನಿಮಿಷಗಳಲ್ಲಿ ತೀರ್ಮಾನವಾಗಿಬಿಡುತ್ತೆ ಅನ್ನುವಾಗ ಆ ದಿವಸ ಇಲ್ಲಿ ನಮ್ಮ ಮುಖ್ಯ ಮಂತ್ರಿಗಳೂ ಸಭೆಯಲ್ಲಿ ಹಾಜರಿದ್ದರು, ಆಗೇನೂ ಈ ಎಮರ್ಜೆನ್ಸಿ ಪ್ರಶ್ನೆ ಇರಲಿಲ್ಲ, ಅಷ್ಟರಲ್ಲಿ ನಮ್ಮ ಮುಖ್ಯ ಮಂತ್ರಿಗಳು ಮಂತ್ರಿಗಳು ಇದರ ಬಗ್ಗೆ ಮಾತನಾಡತಕ್ಕವರು ಇನ್ನೂ ಕೆಲವರಿದ್ದಾರೆ ಅದುದರಿಂದ ಇದನ್ನು ಮುಂದುಪರಿಸೋಣ ಎಂದುಬಿಟ್ಟರು. ಅನಂತರ ಇದು ಹಾಗೇನೆ ಮುಂದುವರಿದುಕೊಂಡು ಬರುತ್ತಾ ಇರುವಾಗ್ಗೆ ಈ ಮಧ್ಯೆ ತರ್ತು ಪರಿಸ್ಥಿತಿ ಬೇರೆ ಬಂತು. ಆಗ ಇದನ್ನು ಮುಂದಕ್ಕೆ ಹಾಕಬೇಕೆಂದು ಹೇಳಿದರು. ಈ ದಿವಸ ಆ ಪರಿಸ್ಥಿತಿಗಿಳ್ಯಾವುಪೂ ಇರುವುದಿಲ್ಲವೆಂದು ನಾನು ಭಾವಿಸಿದ್ದೇನೆ. ಏಕೆಂದರೆ—ಈ ದಿವಸ ಪಂಜಾಬ್ ರಾಜ್ಯವನ್ನು ಎರಡು ಮಾಡುವುದಕ್ಕೆ ಹೊರಟಿದ್ದಾರೆ, ಅದಕ್ಕೆಲ್ಲಾ ತುರ್ತು ಪರಿಸ್ಥಿತಿಯಿಲ್ಲ, ಹಾಗೇ ಕರ್ನಾಟಕವನ್ನು ತುಂಡರಿಸಿ ಎರಡು ಮಾಡುವುದಕ್ಕೆ ಹೊರಟಿದ್ದಾರೆ, ಅದಕ್ಕೆ ತುರ್ತು ಪರಿಸ್ಥಿತಿಇಲ್ಲ, ಆದರೆ ನಾನು ಈ ದಿವಸ ಹೇಳಬೇಕೆಂದು ಇರತಕ್ಕ ವಿಚಾರದಲ್ಲಿ ರಾಭ—ಲುಕ್ಸಾನು ಎರಡೂ ಇಲ್ಲದ್ದು. ಆದರೆ ಇದರಲ್ಲಿ ಒಂದು ಮೂಲಭೂತ ಅಂಶವಿದೆ. ಸ್ವಾಮಿ ಅಧ್ಯಕ್ಷರೇ: ತಾವು ದಯವಿಟ್ಟು ಇದನ್ನು ಕೇಳಬೇಕು, ಈ ದಿವಸ ಯಾರು ಈ ಕರ್ನಾಟಕ ಎಂಬ ಹೆಸರನ್ನು ವಿರೋಧ ಮಾಡುತ್ತಿದ್ದಾರೋ ಅವರೆಲ್ಲರೂ ಹಿಂದೆ ಈ ಹೆಸರನ್ನು ಈ ರಾಜ್ಯಕ್ಕಿಡಲು ಒಪ್ಪಿಕೊಂಡಿದ್ದಾರೆ. ಆದರೆ ಮತ್ತೆ ಈ ದಿವಸ ಹೆಸರಿನಲ್ಲೇನಿದೆ ಎಂದು ಕೇಳುತ್ತಿದ್ದಾರೆ. ಅದಕ್ಕೆ ನಾನು ಅದರಲ್ಲಿಯೂ ಒಂದು ಮಹತ್ವ ಅಡಗಿದೆ ಎಂದು ಹೇಳಲಿಚ್ಚಿಸುತ್ತೇನೆ. ಅದು ಹೇಗೆಂದರೆ—ನಾವು ರಾವಣ, ಎಂಬ ಹೆಸರನ್ನು ಕೇಳಿದಾಗ ಒಂದು ಭಾವನೆ ಮನಸ್ಸಿನಲ್ಲಿ ಬಂದರೆ, ರಾವಣ ಎಂದು ಹೇಳಿದಾಗ ಆ ಭಾವನೆಗೆ ತದ್ವಿರುದ್ಧವಾದ ಇನ್ನೊಂದು ಭಾವನೆ ಬರುತ್ತದೆ. ಹಾಗೇ ಮಾಹಾದೇವ ಎಂಬ ಹೆಸರನ್ನು ಕರೆದಾಗ ಮತ್ತೊಂದು ಭಾವನೆ ಬರುತ್ತದೆ. ಹೀಗೆ ಒಂದೊಂದುಹೆಸರಿನಲ್ಲೂ ಒಂದೊಂದು ವಸ್ತುವಿನಲ್ಲೂ ಒಂದೊಂದು ಗುಣಗಳಿರುತ್ತವೆ

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ನಾನೊಂದು ಕ್ರಿಯಾರೀಪವನ್ನು ವನ್ನು ನೂಚಿಸಬೇಕಾಗಿದೆ. ಅದೇನೆಂದರೆ: 1956ನೇ ಇಸ್ವಿಯಲ್ಲೇ ರಾಜ್ಯಗಳ ಪುನರ್ವಿಂಗಡಣೆ ಯಾದಾಗ ಆ ಎಸ್ಸಾರ್ಸಿ ರಿಪೋರ್ಟಿನಲ್ಲೇ ಈ ರಾಜ್ಯಕ್ಕೆ ಮೈಸೂರೆಂಬ ಹೆಸರಿರಬೇಕು ಅನ್ನುವುದಾಗಿ ಈಗಾಗಲೇ ತೀರ್ಮಾನವಾಗಿದೆ. ಹಾಗೆ ಒಂದಾವರ್ತಿ ತೀರ್ಮಾನವಾದ ವಿಷಯವನ್ನು ಮತ್ತೆ ಚರ್ಚೆ ಮಾಡಬಹುದೇ ಎಂಬುದೇ ನನ್ನ ಕ್ರಿಯಾರೋಪ.

Mr. SPEAKER.—A point of order has been raised saying that it is already decided by this House in an appropriate manner that the name of Mysore should be retained as it is and therefore this discussion cannot take place here. If the member had heard the ruling given by me in the earlier point of order, he would not have raised this point of order. I am sorry members do not remain present throughout and they are defaulters in that respect. They do not even sit half as much time as I sit. There is no point of oder.

ಶ್ರೀ ಎ. ಜೆ. ದೊಡ್ಡಮೇಟಿ.—ಸ್ವಾಮಿ ಹೀಗೆ ಈ ಹೆಸರಿನಲ್ಲೂ ಒಂದು ಮಹತ್ವ ಉಂಟು. ಕರ್ನಾಟಕ ಎನ್ನುವುದು ಯಾರೊಬ್ಬರ ಸ್ವತ್ತೂ ಅಲ್ಲ. ಅದನ್ನು ಅನೇಕವೇಳೆ ಚರ್ಚೆ ಮಾಡಿ ಇಡೀ ಕರ್ನಾಟಕಕ್ಕೆ ಸಂಬಂಧಪಡತಕ್ಕ ಹೆಸರು ಇದಾದ ಕಾರಣ ಇವರಲ್ಲಿ ಮೈಸೂರು ಸಹಾ ಸೇರಿರುವುದರಿಂದ ಇದಕ್ಕೆ ಆ ಹೆಸರನ್ನು ಇಡತಕ್ಕದ್ದು ಸರಿಯೆಂಬುದಾಗಿ ತೀರ್ಮಾನಮಾಡಿದ್ದಾರೆ. ಇದಕ್ಕೆ ಅನೇಕ ಮೂಲಾಧಾರಗಳಿಂಟು. ಈ ದಿವಸ ಈ ನಗರದ ಚಾಮರಾಜಪೇಟೆಯಲ್ಲಿರತಕ್ಕ ಸಾಹಿತ್ಯ ಪರಿಷತ್ತು ಏನಿವೆ ಅದನ್ನು ಹಿಂದಿನ ಶ್ರೀಮಾನ್ ಯುವರಾಜರವರೇ ಸ್ಥಾಪನೆ ಮಾಡಿದ್ದು. ಆ ಸಂಸ್ಥೆಯವರೂ ಕೂಡ ಇದಕ್ಕೆ ಸಾಂಸ್ಕೃತಿಕ ದೃಷ್ಟಿಯಿಂದಲೂ ಕರ್ನಾಟಕ ಎಂಬ ಹೆಸರೇ ಸರಿಯಾದುದು ಎಂದು ಹೇಳಿದ್ದಾರೆ. ಗೌರವಾನ್ವಿತರಾದಂಥ ನಮ್ಮ ಮೈಸೂರು ಅರಸರು ಕೂಡ ವಿಸ್ತೃತ ಕರ್ನಾಟಕ ಸಾಮ್ರಾಜ್ಯ ರತ್ನ ಸಿಂಹಾಸನಾಧೀಶ್ವರ ಎಂಬುದಾಗಿ ಕರೆಯಲ್ಪಡುತ್ತಿದ್ದರು. ಇಂಥ ಉದಾಹರಣೆಗಳು ಒಂದರಲ್ಲಾ, ಎರಡರಲ್ಲಾ, ಮೂರರಲ್ಲಾ ಅನೇಕ ಇರುತ್ತವೆ. ನಮ್ಮ ವಿರೋಧ ಪಕ್ಷದ ನಾಯಕರಾಗಿರತಕ್ಕ ಶ್ರೀಮಾನ್ ಶಿವಪ್ಪನವರು ಅವರು ಒಂದು ಸಂಘವನ್ನು ಸ್ಥಾಪಿಸಿದ್ದಾರೆ. ಅದರ ನಾಮಕರಣ ಸಂಪೂರ್ಣ ಕರ್ನಾಟಕ ಪರಿಷತ್ತು ಎಂಬುದಾಗಿದೆ, ಅದಕ್ಕೆ ಇಂದಿನ ಅಧ್ಯಕ್ಷರು ಶ್ರೀ ಕಡಿದಾಳ್ ಮಂಜಪ್ಪನವರು.

ಶ್ರೀ ಜಿ. ವಿ. ಗೌಡ (ಪಾಳ್ಯ).—ಅವುಗಳೆಲ್ಲಾ ಖಾಸಗೀ ಸಂಸ್ಥೆಗಳು. ಅವುಗಳಿಗೆ ಅವರು ಏನು ಬೇಕಾದರೂ ಹೆಸರುಗಳನ್ನು ಇಟ್ಟುಕೊಳ್ಳಬಹುದು. ಆದರೆ ಇಲ್ಲಿ ಹಾಗೆ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಇಲ್ಲಿ ಒಂದು ಪಾರ್ಲಿಯಮೆಂಟು, ಶಾಸನ ಸಭೆ ಇತ್ಯಾದಿಗಳೆಲ್ಲಾ ಇರುತ್ತವೆ. ಈ ವಿಚಾರದಲ್ಲಿ ಮೈಸೂರು ಕಾಂಗ್ರೆಸ್‌ನವರು ಏನು ಕ್ರಮ ಕೈಗೊಂಡಿದ್ದಾರೆಂಬುದನ್ನು ಹೇಳಿ ? ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿಯವರು ಶ್ರೀಮಾನ್ ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ಅರಿಸಿ ಕೆರೆಯಲ್ಲಿ ವಿಶೇಷವಾಗಿ ಚರ್ಚೆ ನಡೆಸಿ, ಕರ್ನಾಟಕವೆಂದು ಈ ರಾಜ್ಯಕ್ಕೆ ಹೆಸರು ಇಡಬೇಕೆಂದು ತೀರ್ಮಾನ ಮಾಡಿದ್ದಾರೆ. ನಾವು ಸಹ ಅದನ್ನು ಒಪ್ಪಿದ್ದೇವೆ. ಅದನ್ನು ಒಪ್ಪುವವರು ಎ.ಐ.ಸಿ.ಸಿ. ಯವರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—10 ವರ್ಷವಾದ ಮೇಲೆ ಮಗುವಿಗೆ ನಾಮಕರಣ ಮಾಡಲು ಹೊರಟಿದ್ದಾರೆ !

ಶ್ರೀ ಎ. ಜೆ. ದೊಡ್ಡಮೇಟಿ.—ಇದಕ್ಕೆ ಬೇಕಾದರೆ ಒಂದು ಕಥೆಯನ್ನು ಹೇಳುತ್ತೇನೆ. ನಮ್ಮ ಸ್ನೇಹಿತರೊಬ್ಬರ ಮನೆಯಲ್ಲಿ ಒಂದು ಚಿಕ್ಕ ಹೆಣ್ಣುಮಗು ಇತ್ತು. ಅದಕ್ಕೆ ಅವರು ಬೇಬಿ ಬೇಬಿ ಎಂದು ಕರೆಯುತ್ತಿದ್ದರು. ಆ ಮಗುವಿಗೆ 20 ವರ್ಷವಯಸ್ಸಾದ ಮೇಲೆ ಮದುವೆ ಮಾಡಿ ಗಂಡನ ಮನೆಗೆ ಕಳುಹಿಸಿದರು. ಆ ಹುಡುಗಿಯ ಹೆಸರು ಸರೋಜಿನಿ ಎಂದು ಗಂಡನ ಮನೆಯವರು ಆ ಹೆಸರಿನಿಂದ ಕೂಗಿದಾಗ ಆ ಹುಡುಗಿ ಮಾತನಾಡಲಿಲ್ಲ. ನನ್ನ ಹೆಸರು ಸರೋಜಿನಿಯಲ್ಲ, ಬೇಬಿ ಎಂದು ಹೇಳಿದಳು. ನಂತರ ಹುಡುಗಿಯ ತಂದೆಯು ಬಂದು ಹೇಳಿದರು. ನಾವು ಹುಡುಗಿಯಾಗಿದ್ದಾಗ ನಿನಗೆ ಬೇಬಿ ಎಂದು ಕರೆಯುತ್ತಿದ್ದೆವು. ಈಗ ದೊಡ್ಡವಳಾಗಿದ್ದೀಯೆ, ಆದ್ದರಿಂದ ಸರೋಜಿನಿ ಎಂದು ಕೆರೆಯುತ್ತಾರೆಂದು. ಅದೇ ರೀತಿ ಮೊದಲು ಮೈಸೂರು ಚಿಕ್ಕದಾಗಿತ್ತು, ಆಗ ಮೈಸೂರು ಎಂಬ ಹೆಸರು ಸರಿಯಾಗಿತ್ತು. ಈಗ ದೊಡ್ಡದಾಗಿರುವುದರಿಂದ ಕರ್ನಾಟಕವೆಂದು ಕರೆಯುವುದು ಸೂಕ್ತ. ಹಿಂದೆ 29-9-1957 ರಲ್ಲಿ ಈ ವಿಷಯದ ಬಗ್ಗೆ ಒಂದು ಮನವಿ ಪತ್ರ ಕೊಟ್ಟು ಎಲ್ಲರಲ್ಲೂ ಒಂದು ಭಾವನೆ ಇರಬೇಕಾದರೆ, ನಿಶ್ಚಿತವಾದ ಭಾವನೆ ಇರಬೇಕಾದರೆ ಕರ್ನಾಟಕವೆಂದು ಕರೆಯುವುದು ಸೂಕ್ತವೆಂದು ತಿಳಿಸಿದ್ದೆ.

ಅಧ್ಯಕ್ಷರು.—ತಾವು ಕುಳಿತು ಬೇಕಾದರೆ ಮಾತನಾಡಿ ; ಗಟ್ಟಿಯಾಗಿ ಮಾತ್ರ ಮಾತನಾಡಬೇಡಿ.

ಶ್ರೀ ಎ. ಜೆ. ದೊಡ್ಡಮೇಟಿ.—ಅಧ್ಯಕ್ಷರ ಸೂಚನೆಗೆ ಕೃತಜ್ಞನಾಗಿದ್ದೇನೆ. ಹೆಚ್ಚು ಕಡಿಮೆ ಎಲ್ಲರೂ ಸಹ ಕರ್ನಾಟಕವಾಗಬೇಕೆಂದು ಒಪ್ಪಿದ್ದಾರೆ. ಎಲ್ಲಾ ಪಕ್ಷಗಳಾದ ಪಿ.ಎಸ್.ಪಿ., ಜನಸಂಘದವರು, ಸ್ವತಂತ್ರ ಪಕ್ಷದವರು ಕರ್ನಾಟಕ ಎಂಬ ಹೆಸರಿಡುವುದಕ್ಕೆ ಒಪ್ಪಿದ್ದಾರೆ. ಎ.ಐ.ಸಿ.ಸಿ.ಗೆ ಕರ್ನಾಟಕವೆಂದು ಹೆಸರಿಡಬೇಕೆಂದು ಹೇಳಿ ಪ್ರದೇಶ ಕಾಂಗ್ರೆಸ್ ಕಮಿಟಿಯವರು ಶ್ರೀ ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ತೀರ್ಮಾನ ಮಾಡಿ ನಿರ್ಣಯವನ್ನು ಕಳಿಸಿದ್ದಾರೆ. ಅವರು ಶಿಫಾರಸು ಮಾಡುತ್ತಿದ್ದಾರೆ. ನಾವುಗಳು ಸಹ ಆ ಹೆಸರನ್ನು ಇಡಬೇಕೆಂದು ಕಾನೂನು ಬದ್ಧವಾಗಿ ಕೇಳಿದ್ದೇವೆ. ಎ.ಐ.ಸಿ.ಸಿ.ಯಿಂದ ಪಾರ್ಲಿಮೆಂಟಿಗೆ ಹೋಗುತ್ತದೆ. ಅವರು ಏನು ಮಾಡಬೇಕೋ ಅದನ್ನು ಮಾಡುತ್ತಾರೆ. ಹೊಸ ಹೊಸ ರಾಜ್ಯಗಳು ಮೈಸೂರಿಗೆ ಸೇರಿರುವುದರಿಂದ ಮೈಸೂರನ್ನು ಕರ್ನಾಟಕವೆಂದು ಕರೆಯುವುದು ಸೂಕ್ತವೆಂದು ಶ್ರೀ ನೆಹರೂ ರವರು ಹೇಳಿದರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀ ನೆಹರೂರವರು ಏನೇನು ಆಶ್ವಾಸನೆ ಕೊಟ್ಟಿದ್ದರೋ ಅದನ್ನೆಲ್ಲಾ ಮಾಡಿದ್ದಾರೆಯೇ ?

ಶ್ರೀ ಎ. ಜೆ. ದೊಡ್ಡಮೇಟಿ.—ಹೇಳಿದ ವಿಷಯವನ್ನೇ ಮತ್ತೆ ಮತ್ತೆ ಹೇಳುವುದು ಸರಿಯಲ್ಲ. ಧಾರ್ ಕಮೀಷನ್‌ರವರು ಮತ್ತು ಗಡಿ ವಿಷಯವಾಗಿ ಯಾವ ಯಾವ ಕಮೀಷನ್‌ಗಳನ್ನು ನೇಮಕ ಮಾಡಿದ್ದರೋ, ಆ ಎಲ್ಲಾ ಕಮೀಷನ್‌ಗಳ ರಿಪೋರ್ಟಿನಲ್ಲಿ ಕರ್ನಾಟಕವೆಂದೇ ಕರೆದಿದ್ದಾರೆ, ಬೇಕಾದರೆ ದಾಖಲೆಯನ್ನು ನೋಡಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ....ರುಂಡ ಮುಂಡ ಇಲ್ಲದೆ ಇರುವ ಮಗುವಿಗೆ ನಾಮಕರಣ ವೇಕೆಂದು ಕೇಳುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ.—ಕರ್ನಾಟಕದ ಹೊರಗೆ ಇರುವ ಕನ್ನಡ ಪ್ರದೇಶಗಳವರು ಕರ್ನಾಟಕವೆಂದು ಹೆಸರಿಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಿಷ್ಠೂರ ರೀತಿಯಿಂದ ಪತ್ರಗಳನ್ನು ಕಳಿಸಿದ್ದಾರೆ. ಕಾರವಾರಗೋಡಿನವರು ನಿರ್ಣಯ ಮಾಡಿ ಕಳಿಸಿದ್ದಾರೆ. ಮಂಗಳೂರಿನವರೊಬ್ಬರು ನಿರ್ಣಯ ಕಳಿಸಿದ್ದರು. ಸರ್ಕಾರದವರು ಅನೇಕ ರೀತಿಯಿಂದ ಆಶ್ವಾಸನೆ ಕೊಟ್ಟ ಮೇಲೆ ಅವರು ಆ ನಿರ್ಣಯವನ್ನು ವಾಪಸ್ ತೆಗೆದುಕೊಂಡರು. ಈಗ ಸರ್ಕಾರದವರು ಅದಕ್ಕೆ ಉತ್ತರ ಕೊಡ ಬೇಕು. ಇಲ್ಲ ಆಶ್ವಾಸನೆ ಕೊಟ್ಟ ಮೆಂಬರ್ ಉತ್ತರ ಹೇಳಬೇಕು.

ಶ್ರೀ ಬಿ. ಡಿ. ಜತ್ತಿ (ಆಹಾರ ಶಾಖೆಯ ಮಂತ್ರಿಗಳು).—ಅಸೆಂಬ್ಲಿ ಮೆಂಬರ್‌ಗಳು ಸರ್ಕಾರದ ಒಂದು ಅಂಗ. ಸರ್ಕಾರ ಬೇರೆ, ಸದಸ್ಯರು ಬೇರೆ ಅನ್ನತಕ್ಕಂಥದ್ದು ತಪ್ಪು.

ಶ್ರೀ ಎ. ಜೆ. ದೊಡ್ಡಮೇಟಿ.—208 ಮಂದಿಯು ಅಸೆಂಬ್ಲಿ ಮೆಂಬರ್ ಎನ್ನುವುದು ಗೊತ್ತಿದೆ. ನಮಗೆ ತಾವು 26 ಮಂದಿ ಬೇರೆಯಲ್ಲ. ಅದಕ್ಕಾಗಿ ತಾವು ಏನು ವಿಚಾರ ಮಾಡಬೇಕೆಂದರೆ ಕೇವಲ ಕಾನರಗೋಡ್, ಮಡಕಸಿರ.....

Sri V. S. PATIL.—Sir, I rise to a Point of Order. This Hon'ble Member has addressed this House on the previous Resolution regarding the boundary issue, and on that issue he has clearly stated on the Floor of this House that a decision taken by the powerful Parliament of our country cannot be disturbed anywhere by anybody. That is the opinion given by him. Now, is it in order for the same member to say that the decision, so far as the name of the State is concerned, taken by the Parliament can be disturbed by passing a Resolution ? Is it in order for an Hon'ble member of this House to change his opinion in a day or two ?

SRI G. V. GOWDA.—The point raised involves an issue of a similar nature. They are almost identical with each other. When Sri A. J. Doddameti agrees that what has been done by Parliament in respect of Re-organisation of States should not be disturbed under any circumstances, even the decision given by the Parliament should also receive the same kind of treatment.

SRI K. S. SURYANARAYANA RAO.—It was clearly stated on a discussion when the Andhra Legislators met and decided about Bidar, and the Parliament rejected the amendments moved in that respect. Therefore, where is the sanctity if you go on disturbing these things and how can this very hon'ble member make such a contradictory statement ?

ಶ್ರೀ ಕೆ. ಪಿ. ಗದಗ್.—ಯಾವ ವಿಷಯಕ್ಕೆ ತಿದ್ದುಪಡಿ ಎಂದರೆ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗಿ ಯಾವುದು ರಿಜಕ್ಟ್ ಆಯಿತೋ ಅದನ್ನು ಪುನಃ ಎತ್ತಬಾರದು ಎನ್ನುವಂಥಾದ್ದು. ಈಗ ಈ ಹೆಸರಿನ ಬಗ್ಗೆ ಪಾರ್ಲಿಮೆಂಟಿನಲ್ಲಿ ಸೂಚನೆಯಾಗಲೀ ಬಂದಿಲ್ಲ. ಅದಕ್ಕೆ ಆಸ್ಪದವಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಪಾರ್ಲಿಮೆಂಟಿನಲ್ಲಿ ಪಂಜಾಬ್ ಮಾದರಿಯಾಗಬೇಕೇ ? ನಾನು ಭಾಷಣ ಮಾಡುತ್ತಿರುವಾಗ ಮಾನ್ಯ ಸದಸ್ಯರು ರೂಲಿಂಗ್ ಕೊಟ್ಟಿದ್ದಾರೆ. (ನಗು) ಅದಕ್ಕೆ ನಾನು ಉತ್ತರ ಹೇಳಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ತರಹ ಈ ಸಭೆಯಲ್ಲಿ ಯಾವಾಗಲೂ ನಡೆಯಲಿಲ್ಲ. ಅದಕ್ಕೋಸ್ಕರ ನಾನು ಮಾತನಾಡುತ್ತಿದ್ದೇನೆ. ಅವರು ಜಡ್ಜ್‌ಮೆಂಟ್ ಕೊಡುವುದು ಎಂದರೇನು, ಇದು ಹೊಸ ವಿಧಾನ. ಶ್ರೀಮಾನ್ ದೊಡ್ಡಮೇಟಿಯವರು ಈ ವಿಷಯದಲ್ಲಿ ಉತ್ತರ ಕೊಡುವುದಾದರೆ ನಮ್ಮದು ಅಭ್ಯಂತರವಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ನನ್ನ ಪ್ರಶ್ನೆ ಇಷ್ಟೇ. ಮಾನ್ಯ ಶ್ರೀ ಪಾಟೀಲರು ಹೇಳಿದಂತೆ ನಾನು ಯಾವಾಗಾಗಲೆ ಪಾರ್ಲಮೆಂಟ್ ನಿರ್ಣಯ ತೆಗೆದುಕೊಂಡು ಅದನ್ನು ರಿ-ಓಪನ್ ಮಾಡಬಾರದು ಎಂದು ನನ್ನ ಭಾಷಣವಲ್ಲಿ ಹೇಳಿದ್ದರೆ ಅದನ್ನು ಬಿಟ್ಟುಕೊಡುವುದಕ್ಕೆ ನಾನು ತಯಾರು ಇದ್ದೇನೆ. ಅದು ಗೊತ್ತಿಲ್ಲದೆ ಯಾರೂ ಏನೂ ಮಾತನಾಡಬಾರದು. ನಾನು ಮಾತನಾಡುವಾಗ ಬಹಳ ಜಾಗರೂಕತೆಯನ್ನು ವಹಿಸಿದ್ದೇನೆ. ಎರಡನೆಯದಾಗಿ ಪಾರ್ಲಮೆಂಟ್ ತೀರ್ಮಾನ ಮಾಡುವುದನ್ನು ಪುನಃ ಬೇರೆ ಯಾರೂ ವಿಚಾರ ಮಾಡಬಾರದು, ಆದರೆ ಅದೇ ಪಾರ್ಲಮೆಂಟ್ ವಿಚಾರ ಮಾಡಬಹುದು. ಆ ಒಂದು ಕಾರಣಕ್ಕಾಗಿ ಆ ಪಾರ್ಲಮೆಂಟ್ ವಿಚಾರ ಮಾಡಬೇಕೆಂದು ಹೇಳುತ್ತಿದ್ದೇನೆಯೇ ಹೊರತು ಆ ಹೆಸರಿನಲ್ಲಿ ಇಲ್ಲಿ ಜೋಗುಳ ಹಾಡುವುದಕ್ಕೆ ನಾನು ಬರಲಿಲ್ಲ. ಆದ್ದರಿಂದ ನಾನು ಈ ಪ್ರಶ್ನೆಯನ್ನು ಪಾರ್ಲಮೆಂಟಿನಲ್ಲಿ ವಿಚಾರ ಮಾಡಲಿ ಎಂದು ಹೇಳುತ್ತೇನೆ. ಅದರ ಬಗ್ಗೆ ಇಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಆದಕಾರಣ ಅವರ point of order ಸರಿಯಲ್ಲ.

Mr. SPEAKER.—It makes me sad to hear members carrying on this kind of discussion. I have said time and again that if a member raises a Point of Order he must bring to my notice which rule is violated. Having done this repeatedly, the essential points that are necessary for raising a Point of Order are ignored and if members go on like that, it makes me feel very sad, because, either I have not been able to convey to them things which ought to be conveyed, which means either I am thoroughly inefficient or the members are ignoring what I have said.

Sri G. V. GOWDA.—What is violated is, a member is expected to be consistent in his statement.

†Sri V. S. PATIL.—We should be enlightened by the Hon'ble Speaker about things which were just now said that unless there is a breach of Rule of the Rules of Procedure there can be no Point of Order in this House. If that is your Ruling, then I will have to withdraw it. But, my contention is that even besides the rules if the conventions that have been developed in Parliamentary practice that a member is expected to adhere to the views which he has expressed on the floor of this House, if this convention is accepted as an unwritten rule, then, I think Sir, my Point of Order is perfectly valid. If you restrict the question of Point of Order only to the rules and their infringement, then, I think, much of the rights of the members of this House will be curtailed.

Mr. SPEAKER.—I am prepared to have a full-dress debate on this. The question is, I did not say rules framed, embodied in the book, Rules of Procedure, any rule in the widest sense including statutory or conventional or anything like that. But, there must be something that is violated. Does the Hon'ble member suggest consistency in argument, consistency in exposition of an idea is a rule to be observed and if it is violated by the members it will go to the fundamental rights of the members? Once he takes up a position, he cannot change. Are we going to debate how he is changing?

Sri V. S. PATIL.—Let us study this point and then you may give a Ruling.

Mr. SPEAKER.—The rule says, "any member of the Legislature who notices violation of order in the House can raise a Point of Order." As regards consistency in argument, members are aware that a person who has voted once at a certain stage of the Bill, by voice vote, votes differently when a division takes place. These are things which have not arisen for the first time. About consistency in argument, I would like my friends to give me an authority. Till then, I will keep the Ruling in abeyance.

The House will now stand adjourned to re-assemble on Monday at 1 P.M.

The House adjourned at Thirty Minutes past Twelve of the Clock to meet again at One of the Clock on Monday, the 1st August 1966.